187 Computy
23/2/2024

ಮೈಸೂರು ವಿಶ್ವವಿದ್ಯಾನಿಲಯ

ಉಪಕುಲಸಚಿವರ ಕಛೇರಿ
ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ
ಮಹಾರಾಜ ಕಾಲೇಜು ಶತಮಾನೋತ್ಸವ ಭವನ
ಮೈಸೂರು–570 005

ಸಂ. ವಿಘ 1/40/2023–24 |622

ದಿನಾಂಕ: 22.02.2024

**"ಅತೀ ಜರೂರು"**

## <u>ಸುತ್ತೋಲೆ</u>

**ವಿಷಯ: ದಿನಾಂಕ 24.02.2024 ಮತ್ತು ದಿನಾಂಕ 25.02.2024 ರಂದು ನಡೆಯಲಿರುವ ಸಂವಿಧಾನ ಮತ್ತು ಭಾರತ ಒಕ್ಕೂಟ ಸಮ್ಮೇಳನ 2024ಕ್ಕೆ ವಿದ್ಯಾರ್ಥಿಗಳು ಭಾಗವಹಿಸುವ ಬಗ್ಗೆ**

**ಉಲ್ಲೇಖ: ನಿರ್ದೇಶಕರು, ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಬೆಂಗಳೂರು, ಇವರ ಪತ್ರ ಸಂ. ಅಂಸಂಸಂ/ಸಿಬ್ಬಂದಿ–01/ಸಿಆರ್/2023–24 ದಿ. 21–02–2024**

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಪತ್ರಕ್ಕೆ ಸಂಬಂಧಿಸಿದಂತೆ, ದಿನಾಂಕ 24–02–2024 ರಂದು ಸಂವಿಧಾನದ ಮೌಲ್ಯಗಳ ಬಗ್ಗೆ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಗಣ್ಯರಿಂದ ವಿಚಾರ ಗೋಷ್ಠಿಯನ್ನು ಮತ್ತು ದಿನಾಂಕ 25–02–2024 ರಂದು ರಾಜ್ಯ ಮಟ್ಟದ ಬೃಹತ್ ಸಮಾವೇಶ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸದರಿ ಕಾರ್ಯಕ್ರಮದಲ್ಲಿ "Young Karnataka" ಕಾರ್ಯಕ್ರಮದಲ್ಲಿನ ವಿಷಯಗಳು ಯುವ ಜನಾಂಗಕ್ಕೆ ಬಹಳ ಉಪಯುಕ್ತವಾಗಿರುವುದರಿಂದ, ವಿದ್ಯಾರ್ಥಿ ಯುವ ಜನರು ಈ ಎರಡೂ ದಿನಗಳ ಕಾರ್ಯಕ್ರಮದಲ್ಲಿ ಭಾಗವಹಿಸಿ ಅದರ ಪ್ರಯೋಜನ ಪಡೆದುಕೊಳ್ಳಲು ಅನುಕೂಲವಾಗುವಂತೆ ತಿಳಿಸಿರುವುದರಿಂದ, ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವ ಸಂಶೋಧಕರು/ವಿದ್ಯಾರ್ಥಿಗಳು **<u>ದಿನಾಂಕ 24.02.2024 ರ ಸಂಜೆ 5.00 ಗಂಟೆಯ ಒಳಗಾಗಿ</u>** "ಉಪ ಕುಲಸಚಿವ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವಿಶೇಷ ಘಟಕ, ಮಹಾರಾಜ ಕಾಲೇಜು, ಶತಮಾನೋತ್ಸವ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು", ಈ ಕಛೇರಿಗೆ ಖುದ್ದು ಭೇಟಿ ನೀಡಿ ಅಥವಾ ದೂರವಾಣಿ ಸಂಖ್ಯೆ: 0821 2419572, 2419474 ಮೂಲಕ ಸಂಪರ್ಕಿಸಿ, ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳುವುದು. ಮೊಬೈಲ್‌ನಿಂದ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳ ಬಯಸುವವರು <u>https://conference-constitutionofindia-karnataka.in/</u> ಲಿಂಕ್‌ನ ಮೂಲಕ ನೊಂದಾಯಿಸಿಕೊಂಡು, ತಕ್ಷಣ ತಮ್ಮ ವಿವರಗಳನ್ನು ಕಡ್ಡಾಯವಾಗಿ ಈ ಕೆಳಗೆ ಸಹಿ ಮಾಡಿರುವವರಿಗೆ ಖುದ್ದಾಗಿ ಅಥವಾ ಮೇಲ್ಕಂಡ ದೂರವಾಣಿ ಮೂಲಕ ಸಲ್ಲಿಸತಕ್ಕದ್ದು.

**ಸೂಚನೆ: ಪ್ರಮಾಣ ಪತ್ರವನ್ನು ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವುದು.**

**ಉಪ ಕುಲಸಚಿವ**
22/2/24

ಗೆ,

1. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು/ಕೇಂದ್ರಗಳು, ಮಾ.ಗಂ, ಮೈಸೂರು
2. ಪ್ರಾಂಶುಪಾಲರು, ವಿ.ವಿ. ಘಟಕ ಕಾಲೇಜುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ನಿರ್ದೇಶಕರು, ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ಕಾಲೇಜು, ಮೈವಿವಿ, ಮೈಸೂರು
4. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು
5. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು.

(1–5: ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತರುವುದು)

6. ನಿರ್ದೇಶಕರು, ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು– ವಿ.ವಿ. ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿ ಪ್ರಚುರ ಪಡಿಸಲು ಕೋರಿದೆ.
7. ನಿರ್ದೇಶಕರು, ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, 3ನೇ ಮಹಡಿ, ಡಾ.ಬಿ.ಆರ್. ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ವಸಂತ ನಗರ, ಬೆಂಗಳೂರು,
8. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತಸಹಾಯಕರು, ಮೈ.ವಿ.ವಿ.